# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/25/2015-16

ದಿನಾಂಕ : 02 /08/ 2016

ಉಪಸ್ಥಿತರು: ಶ್ರೀಲೋಕೇಶ್.ಪಿ.ಎನ್. (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಮಸ್ತಿ ಈರಮ್ಮ, ಗಂಡ ಕ್ಯಾದಿಹಾಳ್ ಮಲ್ಲಪ್ಪ, ಹುಚ್ಚೇಶ್ವರ ನಗರ ಸಿರಿಗೇರಿಗ್ರಾಮ, ಸಿರುಗುಪ್ಪ ತಾಲ್ಲೂಕು | 1.ಮಸ್ತಿ ಹೂನ್ನೂರಸ್ವಾಮಿ ತಂದೆ ಲೇಟ್ ಹಗರಪ್ಪ, ಹುಚ್ಚೇಶ್ವರ ನಗರ ಸಿರಿಗೇರಿಗ್ರಾಮ, ಸಿರುಗುಪ್ಪ ತಾಲ್ಲೂಕು<br>2.ತಹಶೀಲ್ದಾರರು, ಸಿರುಗುಪ್ಪ<br>3.ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ<br>(ಶ್ರೀ ಕೆ.ಮೊಹ್ಮದ್ ರಫೀಕ್, ವಕೀಲರು, ಬಳ್ಳಾರಿ) |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಸಿರಿಗೇರಿ | 561/ಬಿ | 3.15 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.31/1995-96,ದಿನಾಂಕ:08.02.1996 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:07.07.2015, 04.08.2015, 11.08.2015, 22.12.2015,12.07.2016,02.08.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಸಿರಿಗೇರಿ ಗ್ರಾಮದ ಸ.ನಂ.561/ಬಿ ವಿಸ್ತೀರ್ಣ:3.15 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.31/1996-97,ದಿನಾಂಕ:08.02.1996 ಆದೇಶವನ್ನು ಪ್ರಶ್ನಿಸುತ್ತಾರೆ, ಸದರಿ ಜಮೀನಿನ ನಕಲಿ ದಾಖಲೆಗಳನ್ನು ಸಲ್ಲಿಸಿ ಹಕ್ಕು ಬದಲಾವಣೆ ಮಾಡಿಕೊಂಡಿರುವುದನ್ನು ರದ್ದು ಪಡಿಸಿ ಶ್ರೀಮತಿ ಈರಮ್ಮ ಗಂಡ ಮಲ್ಲಯ್ಯ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮನವಿದಾರರು ಕೋರಿರುತ್ತಾರೆ.

ಕಾರಣ ಸದರಿ ವಿವಾದಿತ ಜಮೀನಿನ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳು ಪರಿಶೀಲಿಸಲಾಗಿ 1968 ರಿಂದ 1969 ನೇ ಸಾಲಿನಿಂದ ಹಗರೆಪ್ಪ ಇವರ ಹೆಸರು ಇರುವುದು ದೃಢೀಕೃತ ಪಹಣಿಗಳಿಂದ ಹಾಗೂ ಈಕೆಳಕಂಡ ಅಂಶಗಳಿಂದ ಕಂಡುಬಂದಿರುತ್ತದೆ.

ಮುಂದಿನ ಪುಟಕ್ಕೆ......

1.ವಾದಿಗಳು ಹಗರಪ್ಪ ಎನ್ನುವ ಹೆಸರು ಹೊನ್ನೂರಪ್ಪನ ತಂದೆಯದಾಗಿರದೆ ಹೊನ್ನೂರಪ್ಪ ಸೇರಿದಂತೆ ವಾದಿಗಳಿಗೆ ಕೂಡ ಮುತ್ತಾತನಾಗಿರುತ್ತಾರೆ. ಕಾರಣ ವಾದಿಗಳಿಗೂ ಸದರಿ ಆಸ್ತಿಯಲ್ಲಿ ಹಕ್ಕಿರುವುದಾಗಿ ವಾದಿಸಿರುತ್ತಾರೆ.

1.ಪ್ರಕರಣದಲ್ಲಿನ ಪ್ರಶ್ನಿತ ಆಸ್ತಿಗೆ ಮೂಲ ಮಾಲಿಕರು ಯಾರು?.

2.ಸದರಿ ಪ್ರಶ್ನಿತ ಆಸ್ತಿಯ ಪಹಣಿ ಕಾಲಂ 9 ರಲ್ಲಿ 1995 ರಿಂದ 1996 ರವರೆಗಿನ ಹಗರೆಪ್ಪ ಈ ಹೆಸರು1967 ರಿಂದ 1968 ನೇ ಸಾಲಿನ ಹಿಂದಿನ ಕಂದಾಯ ದಾಖಲೆಗಳಲ್ಲಿ ಇರುವುದೇ ಹೇಗೆ ?.

3.ಇದ್ದರೆ ಯಾವ ವರ್ಷದಿಂದ ಇದೇ?.

4.1927 ರ ಡೈಗ್ಲೋಟ್ ನಲ್ಲಿ ಏನಿದೇ?.

5.1939 ರಲ್ಲಿ ಸೇಲ್ ಡಿಡ್ ನಲ್ಲಿರುವಂತೆ ವಸ್ತ್ರದ ಗುರುಲಿಂಗಯಸ್ವಾಮಿನಿಂದ ಪ್ರಶ್ನಿತ ಆಸ್ತಿ ಖರೀದಿಸಿರುವುದು ಹಗರೆಪ್ಪನ ಆಗಿದ್ದು,ಸದರಿ ಹಗರೆಪ್ಪನ ಹೆಸರು 1967 ರಿಂದ 1968 ರ ಪಹಣಿಗೆ ಬರುವ ಪೂರ್ವದಲ್ಲಿ ಇತರೆ ಕಂದಾಯ ದಾಖಲೆಗಳಲ್ಲಿ ಇರುವುದನ್ನು ಪರಿಶೀಲಿಸುವುದು ಅಗತ್ಯವಿರುತ್ತದೆ.ಈ ಮೇಲಿನ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ,ನ್ಯಾಯ ಸಮ್ಮತ ತೀರ್ಮಾನ ನೀಡುವುದು ಅಗತ್ಯವಿರುತ್ತದೆ. ಕಾರಣ ಈ ಕೆಳಕಂಡ ಆದೇಶ.

:: ಆದೇಶ ::

**ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.**

ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.31/1996-97,ದಿನಾಂಕ:08.02.1996 ಆದೇಶವನ್ನು ರದ್ದು ಪಡಿಸಿದೆ. ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಸಿರಿಗೇರಿ ಗ್ರಾಮದ ಸ.ನಂ.561/ಬಿ ವಿಸ್ತೀರ್ಣ:3.15 ಎಕರೆ ಜಮೀನಿಗೆ ಸಂಬಂಧಿಸಿದಂತೆ 2 ಪಕ್ಷದವರಿಗೂ ಸೂಕ್ತ ಕಾಲವಕಾಶ ನೀಡಿ,ಪ್ರಕರಣದಲ್ಲಿ ಈ ಪ್ರಾಧಿಕಾರ ಪರಿಶೀಲನೆ ಮಾಡಿರುವ ಈ ಮೇಲಿನ ಅಂಶಗಳನ್ನು ಆಧರಿಸಿಕೊಂಡು ನಿಯಮಾನುಸಾರ ವಿಚಾರಣೆ ನಡೆಸಿ,ಪ್ರಶ್ನಿತ ಆಸ್ತಿಯ ಮೂಲ ಪಟ್ಟಾದಾರರನ ಎಲ್ಲಾ ನ್ಯಾಯ ಸಮ್ಮತ ವಾರಸುದಾರರನ್ನು ಗುರುತಿಸಿ, ಹಕ್ಕುದಾಖಲೆ ಮಾಡಿಕೊಡಲು ತಹಶೀಲ್ದಾರರು, ಸಿರುಗುಪ್ಪಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 02-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು,
ಬಳ್ಳಾರಿ.

ಪ್ರತಿಯನ್ನು : ವಾದಿ ಮತ್ತು ಪ್ರತಿವಾದಿಗಳಿಗೆ ಮತ್ತು ತಹಶೀಲ್ದಾರರು ಸಿರುಗುಪ್ಪ ಇವರಿಗೆ